# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.1-24
ಪಿ.ಡಬ್ಲೂಃ8
ಸಿಡಬ್ಲ್ಯೂ-11

ಸಾಕ್ಷಿದಾರರ ಹೆಸರು : ಕೃಷ್ಣಾ ಅಣ್ಣಯ್ಯ ಗೌಡಾ

ತಂದೆಯ ಹೆಸರು : ಅಣ್ಣಯ್ಯ ಗೌಡಾ

ವಯಸ್ಸು : 45 ವರ್ಷ

ಉದ್ಯೋಗ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕುಮಟಾ

ವಾಸ : ಕುಮಟಾ

ದಿನಾಂಕಃ 13-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಅಂಕೋಲಾ ಉಪ ವಿಭಾಗದಲ್ಲಿ ದಿನಾಂಕಃ 24-04-2022 ರಿಂದ ದಿನಾಂಕಃ 19-08-2024 ರ ವರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯ ನಿರ್ವಹಿಸಿದ್ದೇನೆ .

2. ಈ ಸಮಯದಲ್ಲಿ ಹಿಂದಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾದ ಚಾಸಾ 10 ರವರು ಮಾಸ್ತಿಕಟ್ಟಾ ವಲಯ ಅರಣ್ಯ ಮೊಕದ್ದಮೆ ಸಂಖ್ಯೆ 5/2019-20 ಪ್ರಕರಣದ ತನಿಖೆ ಕೈಗೊಂಡು ಸಂಪೂರ್ಣ ಕಡತವನ್ನು ನನಗೆ ವಹಿಸಿಕಟ್ಟಿರುತ್ತಾರೆ . ಈ ಸಮಯದಲ್ಲಿ ಪಾರದೇಶಿಕ ಸಾರಿಗೆ ಅಧಿಕಾರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮಹೆಂದ್ರಾ ಸ್ಕಾರ್ಪಿಯೋ ವಾಹನದ ಬಿ extract ನಮ್ಮ ಕಚೇರಿಗೆ ಸಲ್ಲಿಸಿರುತ್ತಾರೆ . ನಾನು ಈ ಪ್ರಕರಣದ ಕಡತದಲ್ಲಿರುವ ದಾಖಲಾತಿಗಳು , ಅರೋಪಿಗಳ ಹೇಳಿಕೆ ಹಾಗೂ ಇತರ ದಾಖಲಾತಿ ಪರಿಶೀಲಿಸಿ ನ್ಯಾಯಾಲಯದ ಮುಂದೆ ದಿಃ20-12-2023 ರಂದು ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಸಾಕ್ಷಿಗೆ ಸದ್ರಿ ಮಹೆಂದ್ರಾ ಸ್ಕಾರ್ಪಿಯೋ ವಾಹನದ ಬಿ

extract ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ–15 ಎಂದುಗುರುತಿಸಲಾಯಿತು .

ಪಾಟೀ ಸವಾಲು ಆರೋಪಿ ಪರ ಎಸ್ ಆರ್ ಎನ್ ವಕೀಲರಿಂದ ಃ

3. ಸದ್ರಿ ಪ್ರಕರಣದ ಕಡತವನ್ನು ಪಡೆದುಕೊಂಡಾಗ ಈ ಪ್ರಕರಣದಲ್ಲಿರುವ ಸ್ಕಾರ್ಪಿಯೋ ವಾಹನದಲ್ಲಾಗಲಿ ಅಥವಾ ಮಾಂಸದಲ್ಲಾಗಲಿ ಇದೆ ಎನ್ನಲಾದ ಕೂದಲು ಕಂಡು ಬಂತಾ ಎಂದರೆ ನನಗೆ ಗೊತ್ತಿಲ್ಲ . ನಿಮ್ಮ ಕಡತದಲ್ಲಿ ಇಂತಹ ಅರಣ್ಯ ಪ್ರದೇಶದಲ್ಲಿ ಇಂತಹ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸೇರಿದ ಕುರಿಯನ್ನು ಸಾಯಿಸಲಾಗಿದೆ ಎಂಬ ಬಗ್ಗೆ ನಮೂದುವಾಗಿರುವ ಬಗ್ಗೆ ಕಂಡು ಬಂತಾ ಎಂದರೆ ನಾನು ಕೇವಲ ದಾಖಲಾತಿ ಪರಿಶೀಲಿಸಿ ದೋಷಾರೋಪಣೆ ಸಲ್ಲಿಸಿರುತ್ತೇನೆ . ನೀವು ಒಬ್ಬ ದೋಷಾರೋಪಣೆ ಪಟ್ಟಿ ಸಲ್ಲಿಸುವಂತಹ ಅಧಿಕಾರಿಯಾಗಿ ಈ ಪ್ರಕರಣದ ಸತ್ಯಾ ಸತ್ಯತೆಯನ್ನು ಪರಾರ್ಮಶಿಸಿ ನೋಡಿರುತ್ತಿರೊ ಅಥವಾ ಇಲ್ಲವೊ ಎಂದರೆ ಪರಿಶೀಲಿಸಿರುತ್ತೇನೆ . ಯಾವ ಆಧಾರದ ಮೇಲೆ ಈ ಪ್ರಕರಣದಲ್ಲಿರುವ ಪ್ರಾಣಿಯನ್ನು ಕಾಡು ಕುರಿ ಎಂದು ನಿರ್ಣಯಕ್ಕೆ ಬರಲಾಗಿರುತ್ತದೆ ಎಂದು ನೀವು ದಾಖಲಾತಿ ಪರಿಶೀಲನೆ ಮಾಡಿ ನೋಡಿರುತ್ತಿರಿ ಎಂದರೆ ನಾನು ದಾಖಲಾತಿ ಪರಿಶೀಲನೆ ಮಾಡಿ ನೋಡಿರುತ್ತೇನೆ . ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದ DNA ವರದಿಯಿಂದ ಅದು ಕಾಡು ಕುರಿ ಎಂದು ನಿರ್ಣಯಕ್ಕೆ ಬರಲಾಗಿರುತ್ತದೆ . ಆ ವರದಿ ಬರುವ ಮೊದಲು ಅದು ಕಾಡು ಕುರಿ ಎಂದು ಈ ಕಡತದಲ್ಲಿ ನಮೂದಿಸಲಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ . ನಿಪಿ–15 ನ್ನು ಈ ಪ್ರಕರಣದಲ್ಲಿರುವ ಅರೋಪಿಗಳನ್ನು ಹೇಗಾದರೂ ಮಾಡಿ ಸಿಲುಕಿಸಬೇಕೆಂದು ಸೃಷ್ಟಿಸಿ ಕೊಂಡಿದ್ದು ಎಂದರೆ ಸರಿಯಲ್ಲ . ನನಗೆ ಈ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಪ್ರತ್ಯಕ್ಷವಾಗಿ ಇಲ್ಲ ಎಂದರೆ ಸರಿಯಲ್ಲ . ನಮ್ಮ ಇಲಾಖೆಯ ಅಧಿಕಾರಿಗಳು ಎಲ್ಲಾ ಸೇರಿ ಈ ಪ್ರಕಸರಣ ಸೃಷ್ಟಿ ಮಾಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಸದ್ರಿ ದೋಷಾರೋಪಣೆ ಪಟ್ಟಿಗೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.